ಶ್ರೀ ಬಿ.ಶಿವರಾಮು:- ಕೆಲವು ಸಾರಿ ಹೇಳಬೇಕಾಗುತ್ತದೆ.

ಅಧ್ಯಕ್ಷರು:- ಹೌದು ಹೌದು, ಹಾಗೆ ಮಾಡಿಸೋಣ, ನೀವು ಮುಖ್ಯ ಮಂತ್ರಿಗಳಾದಾಗ ಹಾಗೆ ಮಾಡಿಸೋಣ. ಶಿವರಾಮುರವರೇ ಕುಳಿತುಕೊಳ್ಳಿ, ದಯಮಾಡಿ. ತಾಳ್ಮೆ ಪರೀಕ್ಷೆ ಮಾಡಬಾರದು. ಇದೆಲ್ಲಾ ಸದುದ್ದೇಶದ ಅಭಾವದಿಂದ ಆಗತಕ್ಕಂತಹ ಸನ್ನಿವೇಶಗಳು. ಹೀಗಾಗಬಾರದು; ನಂಜಾಮರಿಯವರು ಬಂದು ನಾಲ್ಕೈದು ಸಲ ನನ್ನ ಹತ್ತಿರ ನಿವೇದಿಸಿಕೊಂಡಿದ್ದಾರೆ ಎಂದು, ಅವರು ಮೊದಲನೇ ಸಾರಿ ಆರಿಸಿಬಂದಿದ್ದಾರೆ ಎಂದು ಹೇಳಿ ಈ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಹೇಳಿದರೆ ಅದನ್ನೇ ದೊಡ್ಡ ಚರ್ಚೆಗೆ ಪ್ರಾರಂಭ ಮಾಡಿಸಿಬಿಡುತ್ತೀರಲ್ಲಾ ? ಇನ್ನು ನಾವು ಇಟ್ಟುಕೊಂಡಿರತಕ್ಕಂತಹ ಉಳಿದ ಕೆಲಸ ಏನು ಆಗಬೇಕು? ವ್ಯಾಖ್ಯಾನಗಳು ಬೇಡಿ, ದಯಮಾಡಿ ಕುಳಿತುಕೊಳ್ಳಿ, ಈಗ ಶ್ರೀಮಾನ್ ಮುದ್ದಹನುಮೇಗೌಡರನ್ನು ಕರೆಯುತ್ತಾ ಇದ್ದೇನೆ. ಅವರು ಹೇಮಾವತಿ ನಾಲೆಗೆ ಸಂಬಂಧಿಸಿದಂತೆ ಏನೋ ಮಾತನಾಡಬೇಕೆಂದು ಹೇಳಿದ್ದಾರೆ. ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಅರ್ಥಸಚಿವರು ಹೇಳಿಕೆ ಕೊಡುತ್ತಾರೆ.

ವಿಷಯ :- ಹೇಮಾವತಿ ನಾಲೆ ಕೆಲಸ ಸ್ಥಗಿತಗೊಂಡಿರುವ ಬಗ್ಗೆ. ------

ಶ್ರೀ ಎಸ್.ಪಿ.ಮುದ್ದಹನುಮೇಗೌಡ:- ಸನ್ಮಾನ್ಯ ಸಭಾಧ್ಯಕ್ಷರೇ, ರೈತರ ಬಗ್ಗೆ ಮತ್ತೊಂದು ಪ್ರಮುಖವಾದಂತಹ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತೇನೆ.

ಶ್ರೀ ಎಂ.ಶ್ರೀನಿವಾಸ್:- ಅಧ್ಯಕ್ಷರೇ.....

ಅಧ್ಯಕ್ಷರು:- ಆಯಿತು, ಇದಾದಮೇಲೆ ಕರೆಯುತ್ತೇನೆ ಎಂದು ಹೇಳುತ್ತಿದ್ದೇನೆ.

ಶ್ರೀ ಎಂ.ಶ್ರೀನಿವಾಸ್:- ಅಲ್ಲಿ 400 ಗುಡಿಸಲುಗಳಿಗೆ ಬೆಂಕಿ ಇಟ್ಟಿದ್ದಾರೆ. ಊಟ ಇಲ್ಲ ಅವರಿಗೆ.

ಅಧ್ಯಕ್ಷರು:- ಹಾಗಾದರೆ ಅವರು ಮಾತನಾಡುವುದು ಬೇಡವೇ ?

ಶ್ರೀ ಎಂ.ಶ್ರೀನಿವಾಸ:- ನಾನು ನಿನ್ನೆಯಿಂದ ಹೇಳುತ್ತಿದ್ದೇನೆ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ:- ಸನ್ಮಾನ್ಯ ಅಧ್ಯಕ್ಷರೇ, ಕಾವೇರಿ ಜಲಾನಯನ ಪ್ರದೇಶಕ್ಕೆ ಬರತಕ್ಕಂತಹ ಹೇಮಾವತಿ ನಾಲೆ ಕಾಮಗಾರಿ ಕೆಲಸ ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ಕಳೆದ ಮೂರು ನಾಲ್ಕು ತಿಂಗಳಿಂದ ಈ ಕೆಲಸ ಸಂಪೂರ್ಣವಾಗಿ ಸ್ಥಗಿತಗೊಂಡಿರುವುದರಿಂದ ತುಮಕೂರು ಜಿಲ್ಲೆಯಲ್ಲಿ ರೈತರು ಈ ಹೇಮಾವತಿ ನಮಗೆ ವರದಾನ ಎಂದು ಏನು ಭಾವಿಸಿಕೊಂಡಿದ್ದರು, ಆ ಜಾಗದಲ್ಲಿ ಇವತ್ತು ಈ ಹೇಮಾವತಿ ನಾಲಾ ಯೋಜನೆಯ ಅನುಷ್ಠಾನದ ಬಗ್ಗೆ ಒಂದು ಅನುಮಾನ ಮತ್ತು ಕಳವಳ ಉಂಟಾಗಿದೆ. ಇವತ್ತು 300 ಕೋಟಿ ರೂ.ಹಣವನ್ನು

ನೀರಾವರಿಗೆ ಇಡಲಿಲ್ಲ ಎಂದು ಹೇಳಿಬಿಟ್ಟು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟಂತಹ ಸನ್ಮಾನ್ಯ ಮುಖ್ಯ ಮಂತ್ರಿಗಳು ಇವತ್ತು ನೀರಾವರಿ ಸಚಿವರಾಗಿದ್ದಾರೆ. ದಯಮಾಡಿ ಈ ಯೋಜನೆ ಅನುಷ್ಠಾನದ ಬಗ್ಗೆ ಸರ್ಕಾರದ ನಿಲುವು ಏನು ಎನ್ನುವುದನ್ನು ದಯಮಾಡಿ ಈ ಸದನಕ್ಕೆ ತಿಳಿಸಬೇಕೆಂದು ಈ ಸಂದರ್ಭದಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಶ್ರೀ ಟಿ.ಬಿ.ಜಯಚಂದ್ರ ಅವರು ಮಾತನಾಡಲು ಎದ್ದರು)

ಅಧ್ಯಕ್ಷರು:- ಎಲ್ಲಾ ವಿಷಯಗಳಲ್ಲೂ ತಾವು ಮಾತನಾಡಬೇಕೆಂದರೆ ಹೇಗೆ ? ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲೆಂದು ಅವಕಾಶ ಕೊಟ್ಟಿದ್ದೇನೆ. ಅವರು ಹೇಳಿದ್ದಾರೆ, ನೀವು ಇಬ್ಬರೂ ಒಂದೇ ಜಿಲ್ಲೆಯವರು.

ಶ್ರೀ ಟಿ.ಬಿ.ಜಯಚಂದ್ರ:- ತಮ್ಮ ಚೇಂಬರಿನಲ್ಲಿ ಬಂದು ಇದರ ಬಗ್ಗೆ ಪ್ರಸ್ತಾಪ ಮಾಡಬೇಕೆಂದು ಹೇಳಿ ನಾವು ಕಾಲಿಂಗ್ ಅಟೆನ್‌ಷನ್ ಕೊಟ್ಟಿದ್ದೆವು. ಈಗ ಮುದ್ದಹನುಮೇಗೌಡರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಸ್ವಲ್ಪ ಧ್ವನಿಗೂಡಿಸಬೇಕಾಗುತ್ತದೆ. ಸಭಾಧ್ಯಕ್ಷರೇ, ಇದು ಬಹಳ ಪ್ರಾಮುಖ್ಯವಾಗಿರತಕ್ಕಂತಹ ಪ್ರಶ್ನೆ ಎಂದರೆ ಇವತ್ತು ಕಾವೇರಿ ಜಲಾನಯನ ಪ್ರದೇಶದಲ್ಲಿ ಬರತಕ್ಕಂತಹ ಹೇಮಾವತಿ ಎಂತಹ ಪ್ರತಿಷ್ಠಿತವಾದಂತಹ ಪ್ರಾಜೆಕ್ಟ್ ಎನ್ನತಕ್ಕಂಥದ್ದು ತಮಗೆ ಗೊತ್ತಿರತಕ್ಕಂಥದ್ದು. ಇವತ್ತು ಹಣವನ್ನು ಮೀರಿ ಖರ್ಚು ಮಾಡುತ್ತಾ ಇರತಕ್ಕಂತಹ ಒಂದು ಪ್ರಸಂಗ ಇರುವಂತಹ ಸಂದರ್ಭದಲ್ಲಿ, ಬಜೆಟ್‌ನಲ್ಲಿ ಇಟ್ಟಿರತಕ್ಕ ಹಣವನ್ನೂ ಕೂಡ ಖರ್ಚು ಮಾಡುವಂತಹ ಪ್ರಶ್ನೆ ಇಲ್ಲ. ಇವತ್ತು ಹೇಮಾವತಿ ಪ್ರದೇಶದಿಂದ ಬಂದಿರತಕ್ಕಂಥವರು ಮುಖ್ಯ ಮಂತ್ರಿಗಳಾಗಿರುವಂತಹ ಸಂದರ್ಭದಲ್ಲಿ ಒಂದು ದೊಡ್ಡ ಕೂಗು ಎದ್ದಿದೆ ಇವತ್ತು ತುಮಕೂರು ಜಿಲ್ಲೆಯಲ್ಲಿ. ಇವತ್ತು ದೇವೇಗೌಡರು ಮುಖ್ಯ ಮಂತ್ರಿಗಳು ಆದ ಮೇಲೆ ಹೇಮಾವತಿ ಇರತಕ್ಕಂತಹ ಅದೂ ತುಮಕೂರು ಜಿಲ್ಲೆಯ ಭಾಗದಲ್ಲಿ ಮತ್ತು ಮಂಡ್ಯ ಭಾಗಕ್ಕೆ ಬರತಕ್ಕಂತಹ ನಾಲೆಯ ಕೆಲಸಗಳು ಸ್ಥಗಿತವಾಗಿರುವುದು ಸತ್ಯ. ಅವರು ಬಂದಮೇಲೆ ಎಲ್ಲಾ ಕೂಡ ಸ್ಥಗಿತ ಆಗಿದೆ, ಇನ್ನು ಮುಂದೆ ನಡೆಯುವುದೇ ಇಲ್ಲ ಎನ್ನತಕ್ಕಂಥ ಒಂದು ವಾತಾವರಣ ಆಗಿದೆ. ಅದರ ಜೊತೆಗೆ ಇವತ್ತು ಜನಗಳು ಕೂಡ ರಸ್ತೆ ರೋಖೋವನ್ನು ಮಾಡತಕ್ಕಂತಹ ಕೆಲಸವನ್ನು ಕೂಡ ಸೋಮವಾರದಿಂದ ಪ್ರಾರಂಭ ಮಾಡುವಂತಹ ಕ್ರಮ ತೆಗೆದುಕೊಳ್ಳುತ್ತಿರಬೇಕಾದರೆ ಅದರ ಬಗ್ಗೆ ಇವತ್ತು ಮುಖ್ಯ ಮಂತ್ರಿಗಳು ಕ್ಲಾರಿಫಿಕೇಷನ್ ಕೊಡಬೇಕಾಗುತ್ತದೆ. ಇದರ ಬಗ್ಗೆ ಸಾಕಷ್ಟು ಸಾರಿ ಪ್ರಸ್ತಾಪ ಮಾಡಿದ್ದೇವೆ. ದಯಮಾಡಿ ಅವರು ಏತಕ್ಕೋಸ್ಕರ ನಿಲ್ಲಿಸಿದರು ? ಯಾರಿಂದ ಕೆಲಸ ಪ್ರಾರಂಭ ಆಗಬೇಕಾಗಿತ್ತೋ ಸಾಕಷ್ಟು ಮುಂದುವರಿಯಬೇಕಾಗಿತ್ತೋ ಅಂತಹವರಿಂದಲೇ ಇವತ್ತು ಕೆಲಸ ನಿಂತಿದೆ ಎಂದರೆ....

ಅಧ್ಯಕ್ಷರು:- ಪ್ರಸ್ತಾಪ ಮಾಡಿದ್ದಾದ ಮೇಲೆ ಭಾಷಣಕ್ಕೆ ಏಕೆ ಹೋಗುತ್ತೀರೆಂದು ನನಗೆ ಅರ್ಥ ಆಗುತ್ತಿಲ್ಲ. ನೀವೆಲ್ಲಾ ಪ್ರಾಕ್ಟೀಸ್ ಮಾಡಿದ್ದೀರಿ; ಅಡ್ವೋಕೇಟ್ಸ್ ಆಗಿದ್ದಂತಹವರು, ಹೀಗೆ ಏಕೆ ಮಾಡುತ್ತೀರಿ? ಈಗ ಶಿವರಾಮುರವರು...

ಶ್ರೀ ಶಿವರಾಮು:- ಈಗ ಹಾಸನ ಜಿಲ್ಲೆಯಲ್ಲೂ ಹೇಮಾವತಿ ಮತ್ತು ಯಗಚಿ ಕಾಮಗಾರಿಗಳು ಹೊಸ ಸರ್ಕಾರ ಬಂದಮೇಲೆ ಪೂರ್ಣ ಸ್ಥಗಿತವಾಗಿವೆ. ವಿಶೇಷವಾಗಿ ಯಗಚಿ. ಅಧ್ಯಕ್ಷರೇ, 1994-95ರಲ್ಲಿ 1280 ಲಕ್ಷ ಖರ್ಚು ಆಗಬೇಕಾಗಿತ್ತು, ಇಲ್ಲಿಯವರೆಗೆ ಫೆಬ್ರವರಿವರೆಗೆ ಆಗಿರತಕ್ಕಂಥದ್ದು 615 ಲಕ್ಷ. ಜೊತೆಗೆ ಈ ವರ್ಷದಲ್ಲಿ 1200 ಎಕರೆ ಅಚ್ಚುಕಟ್ಟಿಗೆ ನೀರನ್ನು ಕೊಡುತ್ತೇವೆ ಎನ್ನತಕ್ಕಂಥ ಒಂದು ಗುರಿಯನ್ನು ಕೂಡ ಸರ್ಕಾರ ಹಾಕಿಕೊಳ್ಳತಕ್ಕಂಥದ್ದು ಮಾಡಿದೆ. ಈಗ ಕೆಲಸ ನಿಲ್ಲಿಸಿ ಎಲ್ಲಾ ಟೆಂಡರ್ ಮಾಡುವುದರ ಮೂಲಕ ಮಾಡುತ್ತೇವೆಂದು ಅನ್ನುವಂಥದ್ದನ್ನು ಸರ್ಕಾರ ಹೇಳುತ್ತಾ ಇದೆ.

ಅಧ್ಯಕ್ಷರು:- ಅದು ಬೇರೆ ವಿಷಯ, ಅವರು ಹೇಳಿದ್ದಕ್ಕೆ ಹೊಂದಿಕೊಂಡು ಏನಾದರೂ ಹೇಳುವುದು ಇದ್ದರೆ ಹೇಳಿ. ಟೆಂಡರ್ ಕರೆಯುವುದು ಪೀಸ್ ವರ್ಕ್ ಕೊಡುವುದು ಅವೆಲ್ಲಾ ಬೇರೆ ವಿಷಯ. ಅದು ಇದಕ್ಕೆ ಸಂಬಂಧಿಸಿಲ್ಲ. ಹೇಮಾವತಿ ಪ್ರದೇಶದಲ್ಲಿ ತುಮಕೂರು ವಿಭಾಗದಲ್ಲಿ ಕೆಲಸಗಳು ಸ್ಥಗಿತಗೊಂಡಿದೆ ಎನ್ನತಕ್ಕಂತಹ ಎಂಬ ಅಭಿಪ್ರಾಯ ಬಂದಿದೆ. ಅದಕ್ಕೆ ರೈತರೆಲ್ಲಾ ಏನೋ ಅಜಿಟೇಷನ್ ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ನೀವು ಹಾಸನದ ವಿಭಾಗದವರು. ತುಮಕೂರು ವಿಭಾಗದವರು ಅಲ್ಲ.

ಶ್ರಿ ಬಿ.ಶಿವರಾಮು:- ಆದರಲ್ಲಿ ಹೇಮಾವತಿ ಯಗಚಿ ಎರಡನ್ನೂ ಸೇರಿಸಿ ಕೊಟ್ಟಿದ್ದೇವೆ. ಹಾಸನ ಮತ್ತು ತುಮಕೂರು ಜಿಲ್ಲೆ ಎರಡನ್ನು ಸೇರಿಸಿ ನಾವು ಕೊಟ್ಟಿದ್ದು. ಅದಕ್ಕೆ ನಾನೂ ಸಹಿ ಹಾಕಿದ್ದೇನೆ. ಆದರೆ ಏನಾಗಿದೆ, ಕೆಲಸ ನಿಂತಿದೆ. ಆಲ್ಲಿ ಪ್ರಾರಂಭ ಮಾಡುವುದರಲ್ಲೂ ವಿಳಂಬ ಆಗಲಿಕ್ಕೆ ಕಾರಣ ಏನು ಅಂದರೆ ಇಲಾಖೆ ವತಿಯಿಂದ ತೆಗೆದುಕೊಳ್ಳತಕ್ಕಂಥದ್ದನ್ನು ನಿಲ್ಲಿಸಿದ್ದಾರೆ. ಆದರೆ ಡ್ರಾಫ್ಟ್ ಟೆಂಡರ್ ಏನು ಅಪ್ರೂವ್ ಆಗಬೇಕಿತ್ತೋ ಕೆಲಸಗಳ ಎಸ್ಟಿಮೇಟ್ಸ್ ಅದು ಅಪ್ರೂವ್ ಆಗದೇ ಇರುವುದರಿಂದ ಈ ವಿಳಂಬದಿಂದ ಬಹುಶ: ಇನ್ನೂ 2 ತಿಂಗಳು 3 ತಿಂಗಳು ಮುಂದೆ ಹೋಗಬಹುದು; ರೈತರಿಗೆ ಇದರಿಂದ ಹೆಚ್ಚು ಕಳವಳ ಆಗುತ್ತಾ ಇದೆ. ನೀರು ಸಿಗಬೇಕಾಗಿದ್ದ 1200 ಎಕರೆ ಪ್ರದೇಶ ಯಗಚಿ ಅಚ್ಚುಕಟ್ಟಿನಲ್ಲಿ ಇವತ್ತು ಸಿಗುತ್ತಾ ಇಲ್ಲ ಎನ್ನತಕ್ಕಂಥದ್ದು ಈ ಕಳವಳ ಹೆಚ್ಚಾಗಿ ಆಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರತಕ್ಕಂಥದ್ದನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಸಿ.ಎಸ್.ಪುಟ್ಟೇಗೌಡ (ಶ್ರವಣಬೆಳಗೊಳ) :- ಸನ್ಮಾನ್ಯ ಅಧ್ಯಕ್ಷರೇ, ನೀರಾವರಿ ಬಗ್ಗೆ ಬಹಳ ಸ್ಪಷ್ಟವಾಗಿ ಮಾನ್ಯ ಸದಸ್ಯರಾದ ಮುದ್ದಹನುಮೇಗೌಡರು ಮತ್ತು ನಮ್ಮ ಜಿಲ್ಲೆಯ ಸದಸ್ಯರಾದಂತ ಶಿವರಾಮು ಹೇಳಿದರು ಬಹಳ ಕಳವಳಗೊಂಡಿದ್ದಾರೆಂದು. ರೈತರ ಹೆಸರನ್ನು ಎಲ್ಲರೂ ಬಳಸುತ್ತಾರೆ. ರೈತರು ಕಳವಳಗೊಂಡಿದ್ದಾರೆ ಎಂದು

ಎಲ್ಲರೂ ಇಲ್ಲಿಹೇಳುತ್ತಾರೆ. ದಯಮಾಡಿ ದೂರನ್ನು ರೈತರು ಯಾರೂ ತಂದಿಲ್ಲ ಈ ಸರ್ಕಾರಕ್ಕೆ. ಕಂಟ್ರಾಕ್ಟರ್ ತಂದಿದ್ದಾರೆ. ಕಳೆದ 5 ವರ್ಷ ಸ್ವಾಮಿ, ಇದೇ ಶಿವರಾಮುರವರ ವಿಧಾನಸಭಾ ಕ್ಷೇತ್ರದಲ್ಲಿ ಕಂಟ್ರಾಕ್ಟ್ ಮಾಡಬೇಕಾದರೆ ಇವರ.....

ಅಧ್ಯಕ್ಷರು:- ಆ ರೀತಿ ಮಾಡುವುದಕ್ಕಾಗುವುದಿಲ್ಲ. ಆ ರೀತಿ ಮಾಡಬಾರದು. ಪುಟ್ಟೇಗೌಡರೇ, ದಯಮಾಡಿ ಕುಳಿತುಕೊಳ್ಳಿ. ಇಂದು ನೀವು ಆ ರೀತಿ ಆರೋಪಣೆ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಸಿ.ಎಸ್.ಪುಟ್ಟೇಗೌಡ:- ರೈತರ ಹೆಸರನ್ನು ಬಹಳುವುದು ಬೇಡ.

ಅಧ್ಯಕ್ಷರು:- ನೀವು ಹೊಸ ಸದಸ್ಯರು.

ಶ್ರೀ ಸಿ.ಎಸ್.ಪುಟ್ಟೇಗೌಡ:- ಯಾವ ರೈತರೂ ಕಳವಳಗೊಂಡಿಲ್ಲ. ಇದೇ ಹೇಮಾವತಿ ತುಮಕೂರಿನಲ್ಲಿ.....

ಅಧ್ಯಕ್ಷರು:- ಪುಟ್ಟೇಗೌಡರೇ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ.ಎಸ್.ಪುಟ್ಟೇಗೌಡ:- ಅಲ್ಲ ಸ್ವಾಮಿ, ಇರಿಗೇಷನ್ ಬಗ್ಗೆ ದೇವೇಗೌಡರಿಗೆ ಕಾಳಜಿ ಇಲ್ಲ ಎಂದು ಹೇಳುತ್ತಾರೆ. ಇವತ್ತು ತುಮಕೂರಿನಲ್ಲಿರತಕ್ಕ ಒಬ್ಬ ಚೀಫ್ ಇಂಜಿನಿಯರ್ ಆಫೀಸ್....

ಅಧ್ಯಕ್ಷರು:- ಪುಟ್ಟೇಗೌಡರೇ, ದಯಮಾಡಿ ಕುಳಿತುಕೊಳ್ಳಿ, ತಾವುಹೊಸಬರಿದ್ದೀರಿ.

ಶ್ರೀ ಸಿ.ಎಸ್.ಪುಟ್ಟೇಗೌಡ:- ಕಂಟ್ರಾಕ್ಟರ್ ತಂದುಕೊಟ್ಟ ದೂರನ್ನು ರೈತರು ತಂದು ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ. ರೈತರ ಹೆಸರು ಹೇಳಿ ಎಷ್ಟು ನುಂಗಿ ಹಾಕಿದ್ದಾರೆ ಎಂಬುದರ ಬಗ್ಗೆ ಈ ರಾಜ್ಯದಲ್ಲಿ ಚರ್ಚೆಯಾಗಲಿ.

ಅಧ್ಯಕ್ಷರು:- ಸ್ವಾಮಿ, ಸಭಾನಾಯಕರೇ, ಇದು ನಮ್ಮ ತುಮಕೂರು ಜಿಲ್ಲೆಯ ಶಾಸಕರಲ್ಲಿ ಒಂದು ಅಭಿಪ್ರಾಯ ಇದೆ. ಹೇಮಾವತಿ ಕೆಲಸ ಕಾರ್ಯಗಳಲ್ಲಿ ತುಮಕೂರು ವಿಭಾಗದಲ್ಲಿ ಸ್ವಲ್ಪ ಕೆಲಸ ಸ್ಥಗಿತಗೊಂಡಿದೆ, ಈ ರೀತಿ ಆಗಬಾರದು, ಅದಕ್ಕಾಗಿ ಕೆಲವರು ಚಳುವಳಿಗಳನ್ನೆಲ್ಲಾ ಮಾಡಬೇಕು ಸೋಮವಾರದಿಂದ ಎಂದು ಸರ್ಕಾರದ ಗಮನ ಸೆಳೆಯುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಇದಕ್ಕೆ ತಮ್ಮ ಉತ್ತರ ಕೊಡಿ.

ಶ್ರೀ ಹೆಚ್.ಡಿ.ದೇವೆಗೌಡ (ಮುಖ್ಯ ಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೇ, ಕೆಲಸ

ಸ್ಥಗಿತ ಮಾಡಿದ್ದೇವೆ. ಆದು ಕೇವಲ ತುಮಕೂರು ಜಿಲ್ಲೆ ಅಲ್ಲ, ಹಾಸನ ಜಿಲ್ಲೆ ಅಲ್ಲ, ಮೈಸೂರು ಜಿಲ್ಲೆ ಅಲ್ಲ, ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳಲ್ಲಿ ಕೆಲವು ನಿಯಮಗಳ ವ್ಯಾಪ್ತಿಯಲ್ಲಿ ಆ ಕಾಮಗಾರಿಗಳನ್ನು ತರಬೇಕೆಂದು ಕೆಲಸ ಸ್ಥಗಿತ ಮಾಡಿ ಇಲಾಖಾ ಮುಖ್ಯಸ್ಥರುಗಳಿಗೆ ಸೂಚನೆ ಕೊಟ್ಟಿದ್ದೇನೆ. ಕಾನೂನು ಚೌಕಟ್ಟಿನ ವ್ಯಾಪ್ತಿಯಲ್ಲಿ ಈ ಕೆಲಸ ಮಾಡಲಿಕ್ಕೆ ಕೆಲವು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ. ಅಂದರೆ ಈ ಕೆಲಸ ನಿಲ್ಲಿಸುತ್ತೇವೆ ಎಂದು ಅಲ್ಲ. ಇದರ ಬಗ್ಗೆ ಇವತ್ತು ಸುದೀರ್ಘವಾದ ಉತ್ತರ ಕೊಡುವುದಕ್ಕೆ ಸಾಧ್ಯ ಆಗುವುದಿಲ್ಲ. ರಾಜ್ಯಪಾಲರ ಭಾಷಣದ ಮೇಲೆ ಸಾಕಷ್ಟು ಅವಕಾಶ ಇದೆ. ಎಲ್ಲಾ ವಿವರಗಳನ್ನು ಸಭೆಯ ಮುಂದೆ ಇಡುತ್ತೇನೆ. ಅವತ್ತು ಈ ಸರ್ಕಾರದ ಮುಂದೆ ಯಾವ ರೀತಿ ಆ ಕಾರ್ಯಕ್ರಮಗಳನ್ನು ನಡೆಸತಕ್ಕಂಥದಕ್ಕೆ ನಾವು ನಿರ್ಣಯಗಳನ್ನು ಮಾಡುತ್ತೇವೆ ಎನ್ನುವುದನ್ನು ಸಭೆಯ ಮುಂದಿಡುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಂ. ಶ್ರೀನಿವಾಸ್:- ಸನ್ಮಾನ್ಯ ಸಭಾಧ್ಯಕ್ಷರೇ, ಸುಮಾರು.....
ಶ್ರೀ ಬಿ. ಶಿವರಾಮು:- ಅಧ್ಯಕ್ಷರೇ,.....

ಅಧ್ಯಕ್ಷರು:- ಉತ್ತರ ಕೊಡುತ್ತೇನೆ ಎಂದು ಹೇಳಿದ್ದಾರಲ್ಲಾ ಸವಿಸ್ತಾರವಾಗಿ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ:- ಈಗ ಏನಾಗಿದೆ ಇಡೀ ಜಿಲ್ಲೆಯಲ್ಲಿ ಕೆಲಸ ಅನುಷ್ಠಾನ ಆಗುವುದೇ ಇಲ್ಲ ಎನ್ನುವ ಭಾವನೆ ಬಂದಿದೆ. ಆದರಿಂದ ದಯಮಾಡಿ ಸರ್ಕಾರದವರ ಸ್ಪಷ್ಟ ನಿಲುವನ್ನು ಹೇಳಬೇಕು. ಕೆಲಸ ಮಾಡುತ್ತೇನೆ ಅಥವಾ ಇಲ್ಲ ಎನ್ನುವ ಬಗ್ಗೆ ಸ್ಪಷ್ಟವಾದ ನಿಲುವನ್ನು ತಾವು ದಯಮಾಡಿ ಸರ್ಕಾರದಿಂದ ಕೊಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ವಿಷಯ :- ಬೆಂಗಳೂರಿನ ಕೋರಮಂಗಲದಲ್ಲಿ ಬೆಂಕಿ ಅನಾಹುತದಿಂದ ಗುಡಿಸಲುಗಳ
ಭಸ್ಮ. -------

ಶ್ರೀ ಎಂ. ಶ್ರೀನಿವಾಸ್(ಉತ್ತರಹಳ್ಳಿ):- ಸನ್ಮಾನ್ಯ ಸಭಾಧ್ಯಕ್ಷರೇ, ಮೊನ್ನೆ 23ನೇ ತಾರೀಖು ಸುಮಾರು ರಾತ್ರಿ 8.30 ಗಂಟೆಗೆ ನಮ್ಮ ಕೋರಮಂಗಲದ ಕೊಳಚೆ ಪ್ರದೇಶದಲ್ಲಿ 2 ಕಡೆ ಗುಂಪುಗಳು ಬಂದು ಬೆಂಕಿಯನ್ನು ಹಾಕಿ ಸುಮಾರು 400 ಗುಡಿಸಲುಗಳು ಸುಟ್ಟು ಹೋಗಿವೆ. ಅವತ್ತಿನ ದಿವಸ ಬೆಳಿಗ್ಗೇ ಕಾರ್ಪೊರೇಷನ್ ಕಮಿಷನರ್ ರವರಿಗೆ ಫೋನ್ ಮಾಡಿದ್ದೆ, ಸನ್ಮಾನ್ಯ ಮಂತ್ರಿಯವರಿಗೆ ಫೋನ್ ಮಾಡಿ ಅವರು ಬೀದಿಪಾಲಾಗಿದ್ದಾರೆ ಎಂದು ತಿಳಿಸಿದ್ದೆ. ಅವತ್ತು ರಾತ್ರಿ ಎಲ್ಲಾ ಆರಿಸಿ ಆಯಿತು. ಆದರೆ ಬೆಳಿಗ್ಗೆ ನಾನು ಅಲ್ಲಿಗೆ ಹೋಗಿದ್ದೆ. ಹೋದಾಗ ಸುಮಾರು ಜನಗಳು ಆ ಭಾಗದ ಜನಗಳೆಲ್ಲಾ ಬೀದಿಪಾಲಾಗಿ ನಿಂತಿದ್ದರು. ಅವರಿಗೆ ಊಟ ಇಲ್ಲ. ತಟ್ಟೆ ಇಲ್ಲ. ಏನೂ ಇಲ್ಲ. ಅವರನ್ನು ಯಾರೂ ವಿಚಾರಿಸುವವರೇ ಇಲ್ಲ. ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೆ. ಮಂತ್ರಿಗಳಿಗೂ ಹೇಳಿದ್ದೆ. ಆಮೇಲೆ ಗೃಹ